LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT :
NAME OF THE NEWS PAPER :
DATE :

# ಸಾರ್ವಜನಿಕ ಬದುಕು ಹಾಳುಗೆಡವಿದ ಜಾತಿ, ಹಣ

ಸಾರ್ವಜನಿಕ ಬದುಕನ್ನು ಹಾಳುಗೆಡವಿ, ಸಂವಿಧಾನದ ಆಶಯಗಳಿಗೆ ಭಂಗ ತಂದಿರುವ ಜಾತಿ ಮತ್ತು ಹಣದ ಪ್ರಭಾವ ತಗ್ಗಿಸಲು ಗಂಭೀರ ಚಿಂತನೆ ಹಾಗೂ ಪ್ರಯತ್ನ ಆಗಬೇಕು ಎಂದು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ವಿಧಾನಸಭೆ ಯಲ್ಲಿ ಸೋಮವಾರ ಪ್ರತಿಪಾದಿಸಿದರು.

ಸಂವಿಧಾನ ಕುರಿತ ಚರ್ಚೆಯಲ್ಲಿ ಮಾತನಾಡಿ "ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲೇಬೇಕಿದೆ. ಅದಕ್ಕಾಗಿ ಬಿಎಸ್‌ವೈ ಸರಕಾರಕ್ಕೆ ಎಲ್ಲಾ ಸಹಕಾರ ನೀಡಲು ಸಿದ್ಧರಿದ್ದೇವೆ" ಎಂದು ಹೇಳಿದರು.

"ಟಿ.ಎನ್.ಶೇಷನ್ ಕಾಲದಲ್ಲಿ ಚುನಾವಣೆ ವ್ಯವಸ್ಥೆಯಲ್ಲಿ ಆಗಿದ್ದ ಸುಧಾರಣೆಗಳು ಮತ್ತೆ ದಿಕ್ಕು ತಪ್ಪಿವೆ. ಕರಪತ್ರಗಳ ಬದಲಿಗೆ ಚುನಾವಣೆಯಲ್ಲಿ ಗರಿಗರಿ ನೋಟುಗಳನ್ನು ಚೆಲ್ಲಲಾಗುತ್ತಿದೆ. ಮಾಧ್ಯಮಗಳೂ ಜಾತಿ ಹಿಡಿದು ಹೊರಟಿವೆ" ಎಂದು ವಿಷಾದಿಸಿದರು.

**ಯತ್ನಾಳ್ ವಿರುದ್ಧ ಕಿಡಿ:** "ಅಧಿಕಾರ ಹಿಡಿದು ಗೌಡರ ಕುಟುಂಬ ಸಿರಿವಂತಾಯಿತು ಎಂದು ಯತ್ನಾಳ್ ಹೇಳಿದ್ದಾರೆ. ಅಧಿಕಾರಿಗಳ ವರ್ಗಾವಣೆಯಲ್ಲಿ ಸಾವಿರಾರು ಕೋಟಿ ರೂ. ವಸೂಲು ಮಾಡಿದ್ದಾರೆ ಎಂದೆಲ್ಲಾ ಮಾತಾಡಿದ್ದಾರೆ. ಈ ಆರೋಪವನ್ನು ಯತ್ನಾಳ್ ಸಾಬೀತುಪಡಿಸಿದರೆ ಇಂದೇ ರಾಜೀನಾಮೆ ನೀಡಿ ರಾಜಕಾರಣದಿಂದ ನಿವೃತ್ತನಾಗುತ್ತೇನೆ" ಎಂದು ಕುಮಾರಸ್ವಾಮಿ ಗುಡುಗಿದರು.

ದೇವೇಗೌಡರು ಮಾಜಿ ಪ್ರಧಾನಿಯಾದ ಬಳಿಕವೂ ರಾಜಾಜಿನಗರದ ಬಿಡ್ಡಿ ಚನ್ನಪ್ಪ ಅವರಿಗೆ ಖಾಲಿ ಚೆಕ್ ಕೊಟ್ಟು ಬಡ್ಡಿಗೆ ಸಾಲ ತೆಗೆದುಕೊಂಡು ಪಕ್ಷದ ಅಭ್ಯರ್ಥಿಗಳಿಗೆ ದೇಣಿಗೆ ಕೊಟ್ಟಿದ್ದಾರೆ. ಈ ರೀತಿ ಸಾರ್ವಜನಿಕ ಬದುಕಿನಲ್ಲಿ ಬದುಕುತ್ತಿರುವ ದೇವೇಗೌಡರ ಬಗ್ಗೆ ಮಾತನಾಡಬೇಡಿ. ಈಗಲೂ ಬಿಡ್ಡಿ ಚನ್ನಪ್ಪ ಬದುಕಿದ್ದಾರೆ. ಕೇಳಿಕೊಂಡು ಬನ್ನಿ," ಎಂದರು.

**ಭ್ರಷ್ಟರಿಗೆ ಮಣೆ:** ಮಧ್ಯಪ್ರವೇಶಿಸಿದ ಎಚ್.ಡಿ.ರೇವಣ್ಣ "ರಾಜ್ಯದಲ್ಲಿ 10 ಪರ್ಸೆಂಟ್ ಸರಕಾರ ಇದೆ ಎಂದು ಮೋದಿ ಹೇಳಿದ್ದರು. ಈಗ ಎಷ್ಟು ಪರ್ಸೆಂಟ್ ಸರಕಾರ ಇದೆ? ಎಲ್ಲವನ್ನೂ ಹೇಳಿ," ಎಂದು ತಾಕೀತು ಮಾಡಿದರು. ಆರಗ ಜ್ಞಾನೇಂದ್ರ ಅವರೂ ಧ್ವನಿಗೂಡಿಸಿ "ಮುಗುಮ್ಮಾಗಿ ಬೇಡ, ಮುಕ್ತವಾಗಿ ಮಾತನಾಡಿ" ಎಂದು ಸಲಹೆ ಮಾಡಿದರು.



## ಬಿಎಸ್‌ವೈಗೆ ಥ್ಯಾಂಕ್ಸ್

"ಓದುವ ಕಾಲಕ್ಕೆ ಓದಲಿಲ್ಲ. ಈಗ ಸಮಯ ಸಿಕ್ಕಿದೆ. ಸಂವಿಧಾನ ಸೇರಿ ನಾನಾ ಗ್ರಂಥಗಳನ್ನು ಅಭ್ಯಾಸ ಮಾಡುತ್ತಿದ್ದೇನೆ. ಮೈತ್ರಿ ಸರಕಾರ ಕೆಡವಿ ನನಗೆ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟರು," ಎಂದು ಸಿಎಂ ಬಿಎಸ್‌ವೈಗೆ ಕುಮಾರಸ್ವಾಮಿ ಸದನದಲ್ಲೇ ಥ್ಯಾಂಕ್ಸ್ ಹೇಳಿದರು. ಆದರೆ, ಈ ಮಾತಿಗೆ ಬಿಎಸ್‌ವೈ ಮುಗುಮ್ಮಾಗಿ ಕುಳಿತರು.

## ಮುಸ್ಲಿಮರನ್ನು ಬೇರೆ ಕಣ್ಣಲ್ಲಿ ನೋಡುವುದೇಕೆ?

ವೈವಿಧ್ಯತೆ ಮತ್ತು ಸಹಿಷ್ಣುತೆಯೇ ಭಾರತದ ದೇಶದ ಶಕ್ತಿ. ಆದರೆ, ಮುಸ್ಲಿಂ ಸಮುದಾಯದವನ್ನು ಪ್ರತ್ಯೇಕಿಸಿ, ಬೇರೆ ಕಣ್ಣುಗಳಲ್ಲಿ ನೋಡುತ್ತಿರುವುದು ಏಕೆ? ದೇಶದ ಅಭಿವೃದ್ಧಿಯಲ್ಲಿ ನಮ್ಮ ಕೊಡುಗೆಯೇನೂ ಇಲ್ಲವೇ ಎಂದು ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್ ಪ್ರಶ್ನಿಸಿದರು.

ಪರಿಷತ್‌ನಲ್ಲಿ ಸಂವಿಧಾನದ ಚರ್ಚೆಯಲ್ಲಿ ಮಾತನಾಡಿ, "ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ 163 ಕಡೆ 2-3 ತಿಂಗಳಿನಿಂದ ಧರಣಿಗಳು ನಡೆಯುತ್ತಿವೆ. ಈ ವೇಳೆ ಸಂವಿಧಾನದ ಕುರಿತು ಚರ್ಚೆಗಳು ನಡೆಯುತ್ತಿರುವುದು ವಿಪರ್ಯಾಸ," ಎಂದು ಹೇಳಿದರು.

"ಪ್ರತಿಭಟನೆಗೆ ಅನುಮತಿ ನೀಡಲು ಪೊಲೀಸರು 10 ಲಕ್ಷ ರೂ. ಬಾಂಡ್ ಕೇಳುತ್ತಿದ್ದಾರೆ. ನಷ್ಟ ವಸೂಲಿಗೆ ಕಾಯಿದೆ ಜಾರಿಗೊಳಿಸುತ್ತೀರಾ," ಎಂದು ಆಕ್ರೋಶ ವ್ಯಕ್ತಪಡಿಸಿದರು.